# ಕಥೋಪದೇಶ

# ಏಕ್ ದಿನ್ ಕಾ ಸುಲ್ತಾನ್

ಕಲೆ ಮತ್ತು ಸಾಹಿತ್ಯ : ಶ್ರೀ ಪುರುಷೋತ್ತಮ ಕಾರಂತ

ಬಾದಶಹನೊಬ್ಬ ಕಾಡಿನೊಳಗಲೆಯುತಿದ್ದ-
ನಿಜ ಪುರಕೆ ದಾರಿಗಾಣದೆ ಕಾಡಿನೊಳಗಲೆದು ಬಳಲಿದ್ದ.
ಅಲ್ಲಿ ಮರಕಡಿವ ಹಳ್ಳಿಗನ ಕಂಡು,
'ಪುರಕೆ ದಾರಿಯೆತ್ತ?'—ಎಂದ.
ಕಾಡಿನಂಚಿಗೆ ಬಾದಶಹನನು, ಕರೆತಂದು
'ಇದೇ ನಿಮ್ಮ ದಿಲ್ಲಿಯ ದಾರಿ' —ಅವನೆಂದ.
ಹಳ್ಳಿಗನನುಪಚರಿಸಿ ಬಾದಶಹನೆಂದ,
'ನೀನು ಬಂದರೆ ದಿಲ್ಲಿಗೆಂದಾದರೊಂದು ದಿನ
ನನ್ನ ಭೆಟ್ಟಿಯ ಮಾಡು, ಉಪಕೃತನು
ನಾನೆ'ಂದು.
ವರುಷಗಳು ಸಂದಿತ್ತು. ಒಂದು ದಿನ
ಹಳ್ಳಿಗನು,
'ನನ್ನ ಬಾಳಿನ ಗೋಳು
ಮುಗಿಯದೇಕೆ ?
ಬಾದಶಹನಂದಿತ್ತ ಸ್ನೇಹದ
ನುಡಿಯ ಲಾಭ ಪಡೆವೆನಂತೆ' –
ಎನುತ ದಿಲ್ಲಿಗೆ ಬಂದು
ಬಾದಶಹನನು ಕಂಡ.
ಹಳ್ಳಿಗನ ಕಂಡು
ಸಂತಸದಿ ಅವನೆಂದ:
'ಏನು ಬೇಕಯ್ಯ ಇಂದು ನನ್ನಿಂದ?'
ಹಳ್ಳಿಗನೊ ತನ್ನ ಗೋಳನು ಮರೆತು,
'ಬಾದಶಹನಾಗುವೆನು
ಒಂದು ದಿನ'ಕೆಂದ
'ಸರಿ! ನೀನೆ ಬಾದಶಹನು, ನಾಳೆ ಉದಯಾತು ಉದಯ.'
ಬಾದಶಹನಾದರೆ ನಾಡಿನುದ್ಧಾರಕ್ಕೆ ಏನಗೈಯ್ಯಲಿದೆ ತಾನು
– ಯೋಚಿಸುತ ಹಳ್ಳಿಗನು
ಉದಯವಾಯಿತು– ಕೊಳಚೆಗೇರಿಯಲಿ ಸುಧಾರಣೆ,
ಹಳ್ಳಿಕಾಡಿಗೆ ರಸ್ತೆ, ಮನೆ ಮಠ ಛತ್ರ, ಶಾಲೆ,
ನೇಸರಾದರೂ ದಣಿದು 'ನಾಳೆ ನೋಡುವೆ' ನೆಂದೈದ
ರವಿ ಮತ್ತೆ ಇಣುಕಿತಿರಲು
ಪಟ್ಟದಿಂದಿಳಿದನಾ ಬಡವ ಹಳ್ಳಿಗ.
ತನ್ನ ಹಳ್ಳಿಯ ಕಾಡು ದಾರಿಯಲಿ–ಕಾಡೆಲ್ಲ ನಾಡು
ಊರೆಲ್ಲ ಹೊಸದೇ ಹೊಸದು;
ಸಂತಸದಿ ಮುನ್ನಡೆದು ಕಂಡನಲ್ಲಿ–
ಅದೇ ಗುಡಿಸಲು ಅದೇ ಕೊಡಲಿ ಕಾದಿತ್ತು ಅವನ.
ಹೆಗಲಿಗೇರಿಸಿ ಕೊಡಲಿ–
ನಡೆದನರಸುತ ಕಾಡು... ಎಂದಿನಂತೆ.

ನಾವು ಓದಿಕೊಂಡು ಕೇಳಿಕೊಂಡು ಬೇಕಷ್ಟು ಜ್ಞಾನವನ್ನು ಗಳಿಸಬೇಕು. ಆದರೆ ಅವುಗಳನ್ನೆಲ್ಲ ತಿಳಿದು ಈಗ ನಾವು ಏನು ಮಾಡಬೇಕು, ಹೇಗೆ ಉಪಯೋಗಿಸಬೇಕು



ಎಂಬುದನ್ನೂ ನಾವೇ ಯೋಚಿಸಬೇಕು. ಆ ಎಲ್ಲ ವಿಚಾರಧಾರೆಗಳನ್ನು ನಮಗೋಸ್ಕರ ಉಪಯೋಗಿಸಲು ಕಲಿಯಬೇಕು. ಇದು ನಮ್ಮೆಲ್ಲರ ಕತೆ. ನಾವೆಲ್ಲರೂ 'ಏಕ್ ದಿನ್ ಕಾ ಸುಲ್ತಾನ್' ಆಗುವೆವು ಅಷ್ಟೆ. ಅಂತರ್ಮುಖಿಗಳಾಗಿ ನಮ್ಮ ಕುಂದುಕೊರತೆಗಳನ್ನು ತಿಳಿದುಕೊಂಡು ಸುಧಾರಿಸಿಕೊಂಡಿಲ್ಲ. ಸಮಾಜ ಸುಧಾರಣೆಯನ್ನೇ ಮಾಡಲು ಹೊರಟಿದ್ದೇವೆ. ಆದ್ದರಿಂದಲೇ ಒಳಗೆ ಶಾಂತಿಯಿಲ್ಲ.